ಪೂರ್ಣಾನಂದ, ''ನೀನು ಕುಡಿ ಅಂಜಲಿ. ಅಂಕಲ್ಗೆ ನಾನು ಇನ್ನೊಂದು ಕೊಚ್ಚಿಕೊಡ್ತೀನಿ'' ಅಂದ. ಆನಂದರಾಜು ಖಿನ್ನನಾಗಿ ನನ್ನ ನೋಡುತ್ತಿದ್ದ. ನಾನು ಅಂಜಲಿ ಕೈಗಿಟ್ಟಿದ್ದ ಎಳನೀರನ್ನು ಹಂಗೇ ಹಿಡಿದುಕೊಂಡಿದ್ದೆ. ಅಂಜಲಿ ಸುಮ್ಮನೆ ನಿಂತಿದ್ದಳು. ವಾಪಸು ಕೊಡಲು ಮನಸ್ಸಾಗಲಿಲ್ಲ. ಎದೆ ಮಾತನ್ನು ಹೊರಗೆಡಹಲಾಗದೆ ನಿಧಾನಕ್ಕೆ, ''ಬೇಡ ಪೂರ್ಣ, ಇದನ್ನೇ ಕುಡಿತೀನಿ'' ಎಂದು ಬುಂಡೆಯನ್ನು ಮೇಲೆತ್ತಿದೆ. ಎಳನೀರಿನ ಒಂದೊಂದು ಗುಟುಕಿನಲ್ಲೂ ವಾತ್ಸಲ್ಯ, ಪ್ರೀತಿ, ಮುನಿಸು, ಮಮತೆ, ಆದರ, ನಿರಾಶೆ, ದುಗುಡಗಳ ಭಾವ ತಣ್ಣಗೆ ಇಳಿಯುತ್ತಿರುವಂತೆ ಭಾಸವಾಗತೊಡಗಿತು. ಮುಸ್ಸಂಜೆಯ ಸೆರಗು ಜಾರಿದಂತೆ ಈಗಿಲ್ಲಿ ಮೌನ ಕವುರತೊಡಗಿತು.

## 2

ಆನಂದರಾಜು ಹೊಸಮನೆಯ ವಿಶಾಲ ಕೊಠಡಿಯಲ್ಲಿ ನನ್ನ ಜೊತೆಯಲ್ಲಿ ಮಲಗಿದ್ದ. ಊಟವಾದ ಮೇಲೆ ಹಾಲಿನಲ್ಲಿ ನಾನು, ಅವನು, ಅವನ ಶ್ರೀಮತಿ ಎಲ್ಲ ಕೂತು ಮಾತನಾಡಿದ್ದು ಏನೂ ಅಲ್ಲ. ಅವನಿಗೆ ಹೇಳಲು ಕೇಳಲು ಇನ್ನೂ ವಿಷಯಗಳಿದ್ದವು. ಮಗನ ವಿಚಾರದಿಂದ ಹಿಡಿದು ಆಸ್ತಿಯನ್ನು ಕಬಳಿಸಿದ ತನ್ನಣ್ಣನ ಹುನ್ನಾರದವರೆಗೆ. ರಾಜಕೀಯದ ದೊಂಬರಾಟದಿಂದ ಹಿಡಿದು ಗ್ರಾಮ ಪಂಚಾಯ್ತಿಯ ಭ್ರಷ್ಟಾಚಾರದವರೆಗೆ. ಆದರೆ ತನ್ನಿಂದ ಒಂದೇ ಸೊಲ್ಲು: ಹೂ... ಹೂ!... ಕೊನೆಗೆ ಅವನು ಕೇಳದಿರಲಾರೆ ಎಂಬಂತೆ ಮತ್ತೆ, ''ಯಾಕಿಂತ ನಿರ್ಧಾರ ತಕೊಂಡೆ ಶಿವರಾಜ? ನಿನ್ನ ಅಣ್ಣನನ್ನೇ ಯಾಕಿಂಗೆ ಮಾಡಿದ್ರಿ ಅಂತ ಹೋಗಿ ಕೇಳಬೇಕು ಅಂದ್ಕೊಂಡೆ. ನನ್ನ ಹೆಂಡ್ತೀನೂ ಬಿಡಬೇಡಿ, ಕೇಳಿ ಅನ್ನುತ್ತಿದ್ದಳು. ನಾನು ಉಂಡಾಡಿದ್ದ ಮನೆ ಅದು. ಆದ್ರೆ ನೀನು ಎಲ್ಲ ಮುಗಿಸ್ಕೊಂಡು ಊರು ಬಿಟ್ಟಿದ್ದೆ. ಹೋಗಕ್ಕೆ ಮನಸ್ಸಾಗಲಿಲ್ಲ... ಅದು ಬಿಡು. ದಯವಿಟ್ಟು ಯೋಚನೆ ಮಾಡು – ವಯಸ್ಸಾದ ಮೇಲೆ ಒಂಟಿತನ ಕಷ್ಟ. ಕೈಲಿ ಕೆಲ್ಸ ಅದೆ. ಈಗ್ಲೂ ಯಾರಾದ್ರು ಸರಿಹೊಂದೊ ಹೆಂಗಸನ್ನ ನೋಡೋಣ. ನಿನ್ನ ಮನೆಯೋರು ನಿನ್ನ ಕೈಬಿಟ್ಟಿರಬೌದು, ಆದ್ರೆ ನಾವು ಇದ್ದೀವಿ ಕಣೊ. ನಿನ್ನ ಬೇಸರ, ಜಂಜಾಟದಲ್ಲಿ ನಮ್ಮನ್ನೆಲ್ಲ ಮರೆತಿರಬೌದು. ಆದ್ರೆ ನಾವು ಮರೆತ್ತಿಲ್ಲ ನಿನ್ನ! ನನ್ನ ಹೆಂಡ್ತಿ ಕಾಳಜೀನೆ ನೋಡ್ದಲ್ಲ... ಗೌರಿ ಸೈತ ಕೊನೆಗಾಲ್ದಲ್ಲಿ ಕಣ್ಣೆರು ಹಾಕೊಂಡು ಹೇಳಿದ್ದಳು ಶಿವರಾಜ'' – ಅವನ ಧ್ವನಿಯಲ್ಲಿ ಅಂತಃಕರಣ, ಆತಂಕ, ಆಗ್ರಹಗಳು ತುಂಬಿದ್ದವು. ಸೌಭಾಗ್ಯಮ್ಮ ಸಹ, ''ಹಬ್ಬ, ಜಾತ್ರೆ ಬಂದ್ರೆ ನಿಮ್ಮ ನೆನಪಿಲ್ಲದೆ ಉಂಡಿದ್ದೇ ಕಮ್ಮಿ. ಅತ್ತೆ ಇರೊಗಂಟ ಅವರಿಗೊಂದು ನಿಮ್ಮದೇ ಜಪ. ನೀವೊಂಥರ ಈ ಮನೆ ಮಗ ಇದ್ದಂಗೆ... ಈಗ ದೊಡ್ಡ ಮನಸ್ಸು ಮಾಡಿಯಣ್ಣಾ'' ಒಡಹುಟ್ಟಿದವಳ ತವಕ ತಲ್ಲಣ ತೋರಿದ್ದಳು.

ಈಗ ಆನಂದರಾಜು ಸಹ ಹೆಂಡತಿ ಸೌಭಾಗ್ಯಮ್ಮನಂತೆ ನಾನು 'ಹೂ' ಅನ್ನುವ ಒಂದು ಅಕ್ಷರಕ್ಕಾಗಿ ಕಾಯುತ್ತಿದ್ದ. ''ಅಪ್ಪ ಅವ್ವನ ಜಾಗದಲ್ಲಿ ನಿಂತು ನಿನ್ನ ಓದು, ನಿನ್ನ ಕೆಲಸಕ್ಕಾಗಿ ಸಾಲ ಮಾಡಿದ್ದೀನಿ. ಕೈ ಸುಟ್ಟುಕೊಂಡಿದ್ದೀನಿ. ಆ ಸಾಲಕ್ಕೆ ನಿನ್ನ ಆಸ್ತಿ ಭಾಗ ಸಮನಾಯ್ತು'' ಅಂದ ಅಣ್ಣನ ಕಟು ತೀರ್ಮಾನ ಕಳ್ಳುಬಳ್ಳಿಯನ್ನು ಕತ್ತರಿಸಿಬಿಟ್ಟಿತು. ಆ ಕ್ಷಣಕ್ಕೆ ಆಸ್ತಿ ಬೇಡವಾಯ್ತು. ಮನೆ ಬೇಡವಾಯ್ತು. ಊರು ಬೇಡವಾಯ್ತು. ಸಂಬಂಧ ಬೇಡವಾಯ್ತು. ಹಿಂದೆ ಆಯಾಯ ಸಂದರ್ಭಗಳಲ್ಲಿ ಬೇಡ ಅನಿಸಿದ ಅಭಿಪ್ರಾಯಗಳೇ ತಿಂಗಳು, ವರ್ಷಗಳು ಕಳೆ ಕಳೆದಂತೆ ದೃಢವಾಗಿಬಿಟ್ಟವು. ಕುಂತು ಯೋಚಿಸಲಿಲ್ಲ. ಹೇಳಿಕೊಳ್ಳಲು ಯಾರೊಂದಿಗೂ ಒಡನಾಟವನ್ನು ಇಟ್ಟುಕೊಳ್ಳಲಿಲ್ಲ... ಕಾಲ ಮಾಗಿತ್ತು!

ಅಂಗಾತ ಮಲಗಿ ಸೂರಂಚಿನ ಕತ್ತಲೆಗೆ ದೃಷ್ಟಿ ನೆಟ್ಟೆ. ನಿಂತನೀರಿನ ಕೊಳಕ್ಕೆ ಕಲ್ಲೆಸೆದಾಗ ಎದ್ದ ಅಲೆಗಳಂತೆ ಮನಸ್ಸು. ಯಾವುದೂ ಸ್ಪಷ್ಟವಿಲ್ಲ. ಅತ್ತಿತ್ತ ಹೊರಳಾಡಿ ಮಗ್ಗಲು ಬದಲಿಸಿದೆ. ಅಲ್ಲಿ ಅಂಜಲಿ! ಆ ಅಂಚಿನಿಂದ ಈ ಅಂಚಿಗೆ, ಹಜಾರದ ತುಂಬ ಅಂಜಲಿಯದೇ ಓಡಾಟ. ಗೌರಿಯ